ಖಾಲಿಯಿದ್ದೂ ಕುಳಿತುಕೊಳ್ಳದೆ ಹೋದದ್ದು... ಒಬ್ಬಳು ಮಗುವನ್ನು ಸತತವಾಗಿ ಅಳುವಂತೆ ನೋಡಿಕೊಂಡು ಎಲ್ಲರ ಗಮನವನ್ನು ತನ್ನತ್ತಲೇ ಕೇಂದ್ರಿಕರಿಸಿಕೊಂಡಿದ್ದು... ನಾನು ಮಧ್ಯದಲ್ಲಿ ಇಳಿಯೋದು ಗೊತ್ತಾಗ್ತಾ ಇದ್ದಂತೆ, ಇದು ಮಾರ್ಕೆಟ್‌ಗೆ ಹೋಗೋಲ್ವಂತೆ... ಅಂತ ಅವರೇ ಮಾತನಾಡಿಕೊಂಡ ರೀತಿ... ಮೇಲಿನಿಂದ ನಾಣ್ಯಗಳನ್ನು ಸುರುವಿ ನನ್ನನ್ನು ಸೀಟಿನಿಂದ ಏಳುವಂತೆ ಮಾಡಿದ್ದು... ಎಲ್ಲಾ ಒಂದೊಂದಾಗಿ ಕಣ್ಣು ಮುಂದೆಯೇ ನಡೀತು ಸಾರ್... ಏನೂ ಮಾಡಕ್ಕಾಗ್ಲಿಲ್ಲ... ಯೋಚಿಸಿ ನೋಡಿದರೆ ಮಾಯೆಯೇನೋ ಅನ್ನಿಸ್ತೆ... ಒಂದು ರೀತಿ ಮಂಕು ಕವಿದಂತೆ..." ಅಂದಳು.

ಅವಳ ಬಗ್ಗೆ ಮರುಕ ಅನ್ನಿಸಿತು. ಹುಡುಗಿ ಜಾಣೆ, ಆದರೆ ಊಹೂಂ... ಜಾಗರೂಕತೆಯಿಲ್ಲ. ಪಟ್ಟಣದ ಹುಡುಗಿಯರಿಗಿರಬೇಕಾದ ಹುಷಾರುತನ ಇಲ್ಲ. ಮುಖದ ಮೇಲೆ ಅಬೋಧ ಅಮಾಯಕತ್ವ... ಎಲ್ಲವನ್ನೂ ಗಮನಿಸುತ್ತಾಳೆ. ಎಲ್ಲರನ್ನೂ ಗಮನಿಸುತ್ತಾಳೆ... ಆದ್ರೂ ಸುಲಭವಾಗಿ ಮೋಸಹೋಗುತ್ತಾಳೆ. ಏನನ್ನುವುದು? ಆಯಿತು ಬಿಡಮ್ಮಾ... ಅಂದು ಎದ್ದು ಬಂದೆ.

ಇದು ನಾಣ್ಯ ಸುರುವಿದ ಕಥೆಯಾಯಿತು. ಇನ್ನು ಬೇರೆ ವೆರೈಟಿಯ ಕಲಾವಿದರಿದ್ದಾರೆ. ಬ್ಯಾಂಕುಗಳಿಂದ ಹೊರಬರುವ ಗಿರಾಕಿಗಳೇ ಇವರ 'ಕುರಿಗಳು ಸಾರ್... ಕುರಿಗಳು'. ಅವರು ಎಷ್ಟು ಹಣ ಡ್ರಾ ಮಾಡಿದರು ಅನ್ನುವುದರಿಂದ ಹಿಡಿದು ಅವರ ಬ್ಯಾಗಿನ ಗಾತ್ರ, ಅದನ್ನು ಅವರು ಹಿಡಿದುಕೊಂಡ ರೀತಿ ನೋಡಿ ಇಷ್ಟೇ ಮೌಲ್ಯದ ಹಣ ಇರಬಹುದೆಂದು ಅಂದಾಜು ಮಾಡುವ ಮಂದಿ. ಸಂಖ್ಯೇಲಿ ನಾಲ್ಕೈದು ಮಂದಿ ಇರುತ್ತಾರೆ. ಒಬ್ಬೊಬ್ಬರದು ಒಂದೊಂದು ಕೆಲಸ. ಮಿಕ ಎಷ್ಟು ಹಣ ಬಿಡಿಸಿಕೊಳ್ಳುತ್ತಿದೆ ಎಂದು ಗಮನಿಸುವವನೊಬ್ಬ... ಆತ ದ್ವಿಚಕ್ರ ವಾಹನವನ್ನೇನಾದರೂ ತಂದಿದ್ದರೆ ಅದನ್ನು ಪಂಚರ್ರು ಮಾಡುವವನೊಬ್ಬ... ಗಾಡಿ ತಳ್ಳಿಕೊಂಡು ಹೋಗುವಾಗ ಬೆನ್ನ ಮೇಲೆ ಕೆಮಿಕಲ್ಲು ಸಿಂಪಡಿಸಿ ತುರಿಕೆ ಬರಿಸುವವನೊಬ್ಬ... ತೊಳೆದುಕೊಳ್ಳುವಾಗ ನೀರು ಬಾಟಲಿ ಹಿಡಿದು ಸಹಾಯ ಮಾಡುವವನೊಬ್ಬ... ಇವೆಲ್ಲದರ ನಡುವೆ ಗಮನ ತಪ್ಪಿಸಿ ಹಣದ ಚೀಲವನ್ನು ಲಪಟಾಯಿಸುವವನೇ ಮುಖ್ಯ ಸೂತ್ರಧಾರಿ!

ಹೀಗೇ ಯಾಮಾರಿ ಹಣ ಕಳೆದುಕೊಂಡವರೊಬ್ಬರು ಬಂದಿದ್ದರು. ಅವರು ಹಣ ಇಟ್ಟಿದ್ದು ಕಾರಿನಲ್ಲಿ. ಸ್ಥಳದಲ್ಲಿದ್ದ ಸಿಸಿಟೀವಿ ಕ್ಯಾಮರಾಗಳನ್ನು ತಂದು ನೋಡುತ್ತಾ ಕುಳಿತ ನಮಗೆ ವ್ಯಕ್ತಿಯೊಬ್ಬ ಫೋನಿನಲ್ಲಿ ಮಾತನಾಡುತ್ತಾ ಬರುವುದು ಕಾಣಿಸುತ್ತದೆ. ಕಾರಿನ ಪಕ್ಕಕ್ಕೆ ಬಂದು ಫೋನಿನಲ್ಲಿ ಮಾತನಾಡಿಕೊಂಡೇ ಎಡದ ಕೈಯಿಂದ ಐದಾರು ನೋಟುಗಳನ್ನು ತಾನೇ ನೆಲದ ಮೇಲೆ ಉದುರಿಸುತ್ತಾನೆ. ನಂತರ ಏನೂ ಗೊತ್ತಿಲ್ಲದವನಂತೆ ಆ ನೋಟುಗಳನ್ನು ಕಾರಿನಲ್ಲಿ ಕುಳಿತವನಿಗೆ ತೋರಿಸಿ ಸುಮ್ಮನೆ ನಡೆದುಹೋಗುತ್ತಾನೆ. ಕಾರಿನಲ್ಲಿದ್ದವ ಒಮ್ಮೆ ಜೇಬು ಸವರಿಕೊಳ್ಳುತ್ತಾನೆ. ತನ್ನದಲ್ಲದಿದ್ದರೆ ಸುಮ್ಮನೇ ಕಾರು ಚಲಾಯಿಸಿಕೊಂಡು ಹೋಗಬಹುದಿತ್ತು. ಆದರೆ ಆಸೆ ಅಷ್ಟಕ್ಕೆ ಬಿಟ್ಟೀತಾ?... ತಾನಲ್ಲದಿದ್ದರೆ ಮತ್ಯಾರೋ ಎತ್ತಿಕೊಳ್ತಾರೆ, ತಾನೆ ತೆಗೆದುಕೊಂಡರಾಯ್ತು ಬಿಡು, ಅಂದುಕೊಂಡು ಕೆಳಗಿಳಿಯುತ್ತಾನೆ.

ಪಕ್ಕದಲ್ಲಿ ಲಕ್ಷ ಹಣದ ಜೋಳಿಗೆಯಿದ್ದರೂ ಈತ ಯೋಚನೆಯನ್ನೇ ಮಾಡುವುದಿಲ್ಲ. ಕಾರಿನಿಂದಿಳಿದು ನೋಟುಗಳನ್ನು ಆಯ್ದುಕೊಳ್ಳಲು ಶುರು ಮಾಡಿಬಿಡುತ್ತಾನೆ. ಒಂದೂ ಬಿಡದೆ ಎಲ್ಲವನ್ನೂ ಜೋಡಿಸಿಕೊಂಡು ಎಷ್ಟಿದೆಯೋ ಮತ್ತೊಮ್ಮೆ ಎಣಿಸಿಕೊಂಡು ಕಾರೊಳಗೆ ಕುಂತು ನೋಡಿದರೆ ಹಣದ ಚೀಲ ಮಂಗ ಮಾಯ!